ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ
C/o, ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001, ಕರ್ನಾಟಕ
E-mail ID: icps.kar@gmail.com Ph.No.080-22879381/82

ಸಂಖ್ಯೆ: ಕೆಎಸ್ಐಸಿಪಿಎಸ್/ಮರ/ಅಸ್ಸಾಂ ಮಕ್ಕಳ/31/2020-21 ದಿನಾಂಕ:10.08.2020

ಜಿಲ್ಲ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಎಲ್ಲಾ ಜಿಲ್ಲೆಗಳು.

ಮಾನ್ಯರೇ,

ವಿಷಯ: ಅಸ್ಸಾಂ ರಾಜ್ಯದ ಮಕ್ಕಳನ್ನು ಕಳುಹಿಸಿ ಕೊಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿ.

ಉಲ್ಲೇಖ:
1) ಅಸ್ಸಾಂ ರಾಜ್ಯದ ಮಕ್ಕಳ ಹಕ್ಕುಗಳ ಆಯೋಗ ಪತ್ರದ ಸಂಖ್ಯೆ:ASCPCR(G)42/2017/Part-I/2020/104, Dated Guwahati, the 27th July 2020.
2) ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಪತ್ರ ಸಂಖ್ಯೆ:ಕರಾಮಹರಅ/Assam/SCPCR/2020-21,ದಿ:27-07-2020.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅಸ್ಸಾಂ ರಾಜ್ಯದ ಮಕ್ಕಳು ಕರ್ನಾಟಕ ರಾಜ್ಯದಲ್ಲಿ ಇರುವುದಾಗಿ ಉಲ್ಲೇಖ (2)ರ ಪತ್ರದಲ್ಲಿ ಅಸ್ಸಾಂ ರಾಜ್ಯದ SCPCR ಇವರು ಕರ್ನಾಟಕ ರಾಜ್ಯದ SCPCR ಗೆ ಪತ್ರ ಬರೆದು ಕ್ರಮ ವಹಿಸಲು ಕೋರಿರುತ್ತಾರೆ. KSCPCR ಇವರು ಯಾವುದಾದರೂ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ (ಸಿ.ಸಿ.ಐ) ಅಸ್ಸಾಂ ರಾಜ್ಯದ ಮಕ್ಕಳು ಸಿಕ್ಕಿಹಾಕಿಕೊಂಡಿದ್ದಲ್ಲಿ ಆ ಮಕ್ಕಳನ್ನು ಅಸ್ಸಾಂ ರಾಜ್ಯಕ್ಕೆ ಕಳುಹಿಸಿ ಕೊಡುವಂತೆ ಉಲ್ಲೇಖದ ಪತ್ರದಲ್ಲಿ ಕೋರಿರುತ್ತಾರೆ.

ಉಲ್ಲೇಖ (1) ರಲ್ಲಿ ಅಸ್ಸಾಂ ರಾಜ್ಯದ ಶಿವಸಾಗರ್ ಜಿಲ್ಲೆಯ Chairperson ಆದ Smt. Dipali Swargiary Baruah ಮೊಬೈಲ್ ಸಂಖ್ಯೆ: 7002782258, ಇವರ ದೂರವಾಣಿ ಸಂಖ್ಯೆಗೆ ದೂರವಾಣಿ ಮೂಲಕ ಸಂಪರ್ಕಿಸಿದಾಗ ಸದರಿಯವರು ಸಂಖ್ಯೆ 7349533580 ನಿಂದ ಕರೆ ಬಂದಿದ್ದು, ಇದು ಕರ್ನಾಟಕದ ಮಕ್ಕಳ ಪಾಲನಾ ಸಂಸ್ಥೆಯ ದೂರವಾಣಿ ಸಂಖ್ಯೆ ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ಇಲ್ಲಿ 11 ರಿಂದ 13 ಅಸ್ಸಾಂನ ಮಕ್ಕಳು ಸಿಕ್ಕಿಕೊಂಡಿದ್ದಾರೆ ಎಂದು ತಿಳಿಸಿರುತ್ತಾರೆ. ಆದ್ದರಿಂದ, ಸದರಿಯವರಿಗೆ ದಿನಾಂಕ:30-07-2020 ರಿಂದ ದೂರವಾಣಿ ಕರೆ ಮಾಡಿ ಮಕ್ಕಳ ಮಾಹಿತಿ ಅಂದರೆ ಹೆಸರು, ವಿಳಾಸ, ಜಿಲ್ಲೆ ಹಾಗೂ ಇತರೆ ಮಾಹಿತಿ ನೀಡಲು ಕೋರಲಾಗಿದೆ.

ಸದರಿ ಉಲ್ಲೇಖದ ಪತ್ರದ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು, ತಮ್ಮ ಜಿಲ್ಲೆಗಳಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳ ಮುಂದೆ ಬಂದು ಆಶ್ರಯ ಪಡೆದುಕೊಂಡ ಅಸ್ಸಾಂ ರಾಜ್ಯದ ಮಕ್ಕಳ ಮಾಹಿತಿಯನ್ನು ಸಂಗ್ರಹಿಸಿ ತಕ್ಷಣ ಇವರನ್ನು ಅವರ ಸ್ವಂತ ರಾಜ್ಯಕ್ಕೆ ಕಳುಹಿಸಲು ಮಕ್ಕಳ ಕಲ್ಯಾಣ ಸಮಿತಿ ಆದೇಶ ಪಡೆದು ಎಲ್ಲಾ ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಯೋಜನಾ ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.